

# ಮಕ್ಕಳ ಹೊರೆ ಕಡಿಮೆ ಮಾಡ್ತೀರಾ?

■ ಚಿತ್ರ: ಲೇಖನ: ಸೀತಾ ಕೇಶವ, ಸಿಡ್ನಿ

ಆಸ್ಟ್ರೇಲಿಯಾದಲ್ಲಿ ವಾಸವಿರುವ ನಾನು ಊರಿಗೆ ಬಂದಾಗಲೆಲ್ಲ ಮಕ್ಕಳ ಶಾಲಾ ಹೊರೆಯ ಬಗ್ಗೆ ಗಮನಿಸುತ್ತಲೇ ಇದ್ದೇನೆ. ಮಣಭಾರದ ಚೀಲ ಹೊತ್ತು ಬೆಂಗಳೂರಿನಲ್ಲಿ ಶಾಲೆಗೆ ಹೋಗುವ ಎಳೆಯ ಮಕ್ಕಳನ್ನು ನೋಡಿದಾಗ ಮನಸ್ಸಿಗೆ ಬೇಸರ ಎನ್ನಿಸಿದ್ದಿದೆ. ಪ್ರೈಮರಿ ಶಾಲೆಯ ಮಕ್ಕಳು ಶಾಲೆಗೆ ಹೋಗುವಾಗ ಅನುಭವಿಸುವ ಕಷ್ಟ ಕಾರ್ಪಣ್ಯಗಳನ್ನು ನೋಡಿ ಮನಸ್ಸಿಗೆ ತುಂಬಾ ದುಃಖವೂ ಆಗಿದೆ.

ಸಮೀಕ್ಷೆಯೊಂದರ ವರದಿ ನೋಡಿ: ಮಹಾರಾಷ್ಟ್ರ ಮತ್ತಿತರ ರಾಜ್ಯಗಳಲ್ಲಿ ಮಕ್ಕಳ ಸ್ಕೂಲ್ ಬ್ಯಾಗ್ ಸರಾಸರಿ 5.6ಕೆ.ಜಿ ಯಷ್ಟು ಭಾರ ಇದೆಯಂತೆ. ಒಟ್ಟು 16 ಪುಸ್ತಕಗಳು. ಪ್ರತಿದಿನ ಸರಾಸರಿ ಎಂಟು ವಿಷಯಗಳ ಪಾಠದ ಪುಸ್ತಕ ಮತ್ತು ನೋಟ್ಸ್ ಬುಕ್‌ಗಳನ್ನು ಹೊರಬೇಕು!

ಆಸ್ಟ್ರೇಲಿಯಾದಲ್ಲಿ ಎಳೆಯ ಮಕ್ಕಳಿಗೆ ಇಷ್ಟೊಂದು ಶಾಲಾ ಪಠ್ಯಗಳ ಹೊರೆ ಇಲ್ಲ. ನನ್ನ ಮಕ್ಕಳು ಓದುತ್ತಿದ್ದಾಗ ಮೂರು ಸೆಮಿಸ್ಟರ್ ಇದ್ದು ನಂತರ ನಾಲ್ಕು ಮಾಡಿದ್ದರು. ಇದು ಖಾಸಗಿ ಶಾಲೆಯ ಶುಲ್ಕದ ಅನುಕೂಲಕ್ಕೋ ಅಥವಾ ವರ್ಷದ ಪಾಠದ ಪಠ್ಯ ಕ್ರಮ ಸಮಾನವಾಗಿರಲಿ ಎನ್ನುವುದಕ್ಕೋ ಸ್ಪಷ್ಟವಿಲ್ಲ.

ಹಾಗೆ ನೋಡಿದರೆ ಸುಮಾರು ನಾಲ್ಕು ದಶಕಗಳ ಹಿಂದೆ ಇಲ್ಲಿ ಉಚಿತ ಶಿಕ್ಷಣವೇ ಇತ್ತು. ಈಗ ಕೆಲವು ಸಾರ್ವಜನಿಕ ಶಾಲೆಗಳು ವರ್ಷಕ್ಕೆ ಅತ್ಯಲ್ಪ ಶುಲ್ಕ (ಅದೂ ಕಡ್ಡಾಯವಿಲ್ಲ) ವಿಧಿಸುತ್ತಿವೆ. ಶಾಲೆಯವರೇ, ಪಠ್ಯಪುಸ್ತಕ, ಪೇಪರು ವಗೈರೆ ಎಲ್ಲಾ ಕೊಡುತ್ತಾರೆ. ಮಕ್ಕಳ ಶಾಲೆಯ ಬ್ಯಾಗ್ ನಲ್ಲಿ ಊಟದ ಡಬ್ಬಿ, ನೀರು ಬಾಟಲ್,